# ಸ್ವಪ್ನದ ಪೋರಿ

ಬಹುದೂರ ನೆಡೆದು
ಬಂದಿರುವಳು
ಬಂದ ದಾರಿಯನ್ನೇ
ಮರೆಯುವಂತೆ...


ಉದ್ದ ಜಡೆಯ, ದುಂಡು ಮೊಗದ
ಗಾಜಿನ ಬಳೆತೊಟ್ಟ ಪೋರಿ
ಸೊಲ್ಲು ಪಾಡುತ್ತಾ
ಮಾಡುವಳು ಕಸೂತಿ

ಮೋಹದ ಪಿಶಾಚಿಗೆ
ಅಂದು ಸಿಕ್ಕಿ ಬಿದ್ದ ಅರಗಿಣಿ
ಕೇಳಿದವರಿಗೆಲ್ಲಾ ಅಂದಿನಿಂದ
ಕೊಡುತ್ತಲೇ ಬಂದಿರುವಳು ಕಚಗುಳಿ

ಬಂದವರಿಗೆಲ್ಲಾ
ಪುಷ್ಕಳ ಹಾಸಿಗೆ
ಸಂತೃಪ್ತಿಯ ಸ್ಮೃತಿ ಚಿತ್ರವನ್ನೇ
ಅಚ್ಚಳಿಯದಂತೆ ಬಿಡಿಸಿದ್ದಾಳೆ

ಅಂತಹ ಬೆಳಕಿಲ್ಲದ ಮನೆಯಲ್ಲಿಯೂ
ಕಸುಬುಗಾರ್ತಿಯರಿಗೆ
ಮಾಡಿಕೊಟ್ಟಿದ್ದಾಳೆ ಅವರ
ನಾಲ್ಕಾರು ರವಿಕೆಗೆ ಕಸೂತಿ.

ಲೋಕದ ಕ್ರೂರತೆಗೆ
ಬಲಿಪಶು ಅವಳು
ನರಕಕೂಪದಿಂದ ಬಿಡುಗಡೆಯ
ಬೇಡಿ ದಿನವೂ ಬಿಕ್ಕುತ್ತಿರುವವಳು




ಸುಕ್ಕುಗಟ್ಟಿದ ಅವಳ ಚರ್ಮ
ಕಂಡು ಹೊರದಬ್ಬಿದ್ದಾರೆ
ವಿಮೋಚನೆಯ ಕಣ್ಣಾಲಿಯ ಜೊತೆ
ಪ್ರಶ್ನೆಗೆ ಉತ್ತರ ಸಿಗದೇ ನಡೆದಿದ್ದಾಳೆ.

● **ಅಭಿಷೇಕ್ ಪೈ ಸ್ಯಾಬ್ರಕಟ್ಟೆ**